ಸದ್ದು ಕೊಟ್ಟೆ. ದಿಲೊ... ಅತ್ತಾ ದಿಲೊ" ಎನ್ನುತ್ತ ಚಕಚಕನೇ ಕೆಲಸ ಮಾಡುವ ಪರಿ ನನಗೆ ಸರ್ಕಸ್ ಆಟಗಾರರನ್ನೂ, ಜಾದೂಗಾರರನ್ನೂ ನೆನಪಿಸುತ್ತಿತ್ತು. ಭಾಜಿಯನ್ನು ಸಿದ್ಧಪಡಿಸಿ ಅದೇ ತವಾದಲ್ಲಿ ಹಿಂದೆ ತಳ್ಳಿ ಮುಂದಿನ ಕೊಂಚ ಜಾಗದಲ್ಲಿ ಒಂದು ಬೆಣ್ಣೆ ಮುದ್ದೆಯನ್ನೆಸೆಯುತ್ತಿದ್ದ. ಅದು ಕರಗುವಷ್ಟರಲ್ಲಿ ಅರ್ಧ ಸೀಳಿದ ಪಾವ್‌ಗಳನ್ನು ಅದರ ಮೇಲೆ ತಿಕ್ಕಿ ಕಾಯಿಸುತ್ತಿದ್ದ. ತಮ್ಮ ಒಳಭಾಗದಲ್ಲಿ ಅದನ್ನು ಮೆತ್ತಿಕೊಂಡು ಪಾವ್‌ಗಳು ಬಿಸಿಯೇರುತ್ತಿದ್ದವು. ಪ್ಲಾಸ್ಟಿಕ್ ತಟ್ಟೆಗಳಲ್ಲಿ ಮುಕ್ಕಾಲು ಭಾಗ ಭಾಜಿ ಹಾಕಿ ಪಕ್ಕದ ಜಾಡಿಗಳಿಂದ ಸಣ್ಣಗೆ ಹೆಚ್ಚಿದ ಈರುಳ್ಳಿ, ಕೊತ್ತಂಬರಿ ಸೊಪ್ಪು, ಸಣ್ಣ ಸೇವು ಉದುರಿಸುತ್ತಿದ್ದ. ಮೇಲೊಂದು ಚಿಕ್ಕ ಮುದ್ದೆ ಬೆಣ್ಣೆಯೂ ಬೀಳುತ್ತಿತ್ತು. ಒಂದು ನಿಂಬೆಹೋಳಿನೊಡನೆ ಚಮಚ ಪ್ಲೇಟಿನಲ್ಲಿ ಕೂರುತ್ತಿತ್ತು. ಬೆಣ್ಣೆಯಲ್ಲಿ ಬಿಸಿಯಾದ ಎರಡು ಪಾವ್‌ಗಳು ತಟ್ಟೆಗೆ ಬರುವುದು ಕೊನೆಯ ಹಂತ. ಮಧ್ಯೆ ಅವನೇನು ಆಗಾಗ ಕೈ ತೊಳೆಯುತ್ತಿರಲಿಲ್ಲ. ಆಗ ಅದು ನಮ್ಮ ಗಮನಕ್ಕೂ ಬರುತ್ತಿರಲಿಲ್ಲ ಬಿಡಿ. ತಟ್ಟೆಗಳನ್ನೆತ್ತಿಕೊಂಡು ನಾವು ತುಸುದೂರದಲ್ಲಿದ್ದ ಅಂಗಡಿಗಳ ಕಟ್ಟೆಯ ಮೇಲೆ ಕುಳಿತು ಮನಸಾರೆ ಸವಿಯುತ್ತಿದ್ದೆವು. ಖಾರಖಾರವಾದ ಭಾಜಿಯ ಜೊತೆ ಮಧ್ಯೆ ಆಗಾಗ ಪಾವ್ ಕಡಿದುಕೊಳ್ಳುತ್ತಿದ್ದರೆ ಆಹಾ!... ಸ್ವರ್ಗವೇ ಧರೆಗಿಳಿದು ಬಂದಂತೆ. ಹ್ಞಾಂ... ಇಷ್ಟಕ್ಕೆ ಆಗ ಒಂದೂವರೆ ರೂಪಾಯಿ ಬೆಲೆಯಿತ್ತು. ಎಕ್ಸ್‌ಟ್ರಾ ಪಾವ್‌ಗೆ ನಾಕಾಣೆ. ನಾವು ತನ್ಮಯರಾಗಿ ಸವಿಯುತ್ತಿದ್ದಂತೆ ಮಾತು ಕಡಿಮೆಯಾಗಿ ಕಿವಿ ಚುರುಕಾಗುತ್ತಿತ್ತು. ಪಕ್ಕದ ತರಕಾರಿ ಮಾರ್ಕೆಟ್‌ನಲ್ಲಿನ ಗಲಾಟೆ ಕೇಳಿಸುತ್ತಿತ್ತು. "ಬದನಿಕಾಯಿ ತೊಗೊ ಬಾರೋ ಯಪ್ಪಾ... ಬಂದಾಗಿಂದ ಯಾರೂ ಬಂದಿಲ್ಲ. ಬೋಣಿ ಮಾಡ ಬಾ" ಎನ್ನುವವಳ ಕೂಗಿಗೆ ತಲೆಕೆಟ್ಟ ಗಿರಾಕಿಯೊಬ್ಬ, "ನಿನಗ ತೊಗೊಂಡ ಬಾ ಅಂತ ನಾ ಏನ ಪತ್ರಾ ಹಾಕಿ ಕರದಿದ್ನೇನು?" ಎಂದು ಕಾಲೆಳೆಯುವ ಪರಿಗೆ ಮೆಲ್ಲನೆ ಬಾಯೊಳಗಿನ ಭಾಜಿ ಬೀಳದಂತೆ ನಗುತ್ತಿದ್ದವು.

ಪಾವ್‌ಭಾಜಿ ತಿನ್ನುವುದೂ ಒಂದು ಕಲೆಯೇ. ಚಮಚದಿಂದ ಭಾಜಿ ಸವಿಯುತ್ತ ಖಾರವೆನಿಸಿದಾಗಲೋ... ಮಧ್ಯೆ ಯಾವಾಗಲೋ ಪಾವ್ ಕಡಿದರಾಯಿತು. ಭಾಜಿಯೇ ಮೇನ್ ಡಿಶ್. ಹೀಗಾಗಿ ನಮಗೆ ಎಕ್ಸ್‌ಟ್ರಾ ಅಂತೂ ದೂರ... ಕೊಟ್ಟ ಎರಡು ಪಾವ್‌ಗಳೇ ಜಾಸ್ತಿಯಾಗುತ್ತಿದ್ದವು. ಯಾರಾದರೂ ಚಪಾತಿ ಪಲ್ಯ, ಪೂರಿ ಪಲ್ಯದಂತೆ ನಂಜಿಕೊಂಡು ತಿಂದರೆ ಪರಸ್ಪರ ಮುಖ ನೋಡಿಕೊಂಡು 'ಎಲ್ ಬೋರ್ಡ್ ಗಿರಾಕಿ'ಯ ಪಟ್ಟಕಟ್ಟಿ ಕಣ್ಣಲ್ಲೇ ನಗುತ್ತಿದ್ದೆವು. ಈ ಕಲೆಯಲ್ಲಿ ನಾವಾಗಲೇ ಪರಿಣತಿ ಪಡೆದಿದ್ದೆವಲ್ಲ... ಎಷ್ಟೇ ಖಾರವೆನಿಸಿದರೂ ಅವನಿಟ್ಟ ನೀರು ಮಾತ್ರ ಕುಡಿಯುತ್ತಿರಲಿಲ್ಲ. ಬದಲಾಗಿ ನಾಕಾಣೆಯ ಒಂದು ಕೋನ್ ಐಸ್‌ಕ್ರೀಮ್ ತೆಗೆದುಕೊಂಡು ತಿನ್ನುತ್ತ ಹೊರಡುತ್ತಿದ್ದೆವು. ಅಷ್ಟೇ ಆರೋಗ್ಯಪ್ರಜ್ಞೆ ಆಗ ನಮ್ಮಲ್ಲಿದ್ದುದು. ನಮ್ಮ ಅನೇಕ ಪಾರ್ಟಿಗಳಿಗೆ ಬಾಳು ಸಾಕ್ಷಿಯಾಗುತ್ತಿದ್ದ. "ಬರ್ಥಡೇ ಐತ್ರಿ?" ಎಂದದ್ದೇ ಬರ್ಥಡೇ ಹುಡುಗಿಗೆ ಅರ್ಧ ಸೌಟು ಭಾಜಿ ಜಾಸ್ತಿ ಹಾಕುತ್ತಿದ್ದ. ನಮಗೆ ಕೋಟಿ ರೂಪಾಯಿ ಗಳಿಸಿದಷ್ಟು ಖುಷಿ. ಯಾವುದೋ ಸ್ಪರ್ಧೆಯಲ್ಲಿ ಗೆದ್ದ ಪಾರ್ಟಿ, ಒಳ್ಳೆಯ ಮಾರ್ಕ್ಸ್ ಬಂದ ಪಾರ್ಟಿ ಇತ್ಯಾದಿಗಳು ಅವನ ಸಮ್ಮುಖದಲ್ಲೇ ಜರುಗಿ ಹತ್ತು ರೂಪಾಯಿಗಳಲ್ಲಿ ಮುಗಿದು ಹೋಗುತ್ತಿದ್ದವು. ಮೇಲೊಂದು ಚಿಪ್ಸ್ ಪ್ಯಾಕೆಟ್ ಕೊಂಡು ಎಲ್ಲ ಸೇರಿ ತಿನ್ನುತ್ತಾ ಹೋದರೆ ಭರ್ಜರಿಯಾದಂತೆ. ಕೆಲವೊಮ್ಮೆ ತಂಗಿಯರೊಂದಿಗೆ ಬರುವುದಿತ್ತು. ಬೇರೆ ಸ್ನೇಹಿತೆಯರು... ಪರಿಚಯಸ್ಥರು ಅಲ್ಲೇ ಸಿಗುತ್ತಿದ್ದರು. ಆದರೆ, ನನ್ನನ್ನು ತುಸು ಕಾಡುವ ಸಂಗತಿಯೆಂದರೆ ನಾವು ತಿರುಗಿ ಇಟ್ಟ ಪ್ಲೇಟುಗಳನ್ನು ಅವನ ಮಗ ಬರೀ ನೀರಿನಲ್ಲಿ ಅದ್ದಿ ತೆಗೆಯುತ್ತಿದ್ದ. ಹಾಗಾದರೆ ನಮಗೆ ಕೊಟ್ಟ ಪ್ಲೇಟುಗಳದ್ದೂ ಇದೇ ಗತಿ. ನೋಡುತ್ತಿದ್ದಂತೆ ಮನಸ್ಸು 'ಖಚಕ್' ಎಂದರೂ ತಕ್ಷಣ ಮರೆತು ಬಿಡುತ್ತಿದ್ದೆ. ಈಗಿರುವಷ್ಟು ಸ್ವಚ್ಛತೆಯ ಹುಚ್ಚು, ಆರೋಗ್ಯಪ್ರಜ್ಞೆ ಆಗ ಖಂಡಿತಾ ಇರಲಿಲ್ಲ ಬಿಡಿ. ಹಾಗೆ ಅದೆಷ್ಟು ತಿಂದರೂ ಆರೋಗ್ಯ 'ಕಮ್... ಕಿಮ್' ಎನ್ನದೇ